| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 533/2024**

ಪಿಡ್ಬ್ಲೂಃ 5 ಸಿಡ್ಲ್ಯೂಃ 5

ಸಾಕ್ಷಿದಾರನ ಹೆಸರು ಃ ಧೀರಾಜ್

ತಂದೆಯ ಹೆಸರು ಃ ಸಂಜೀವ

ಪ್ರಾಯ ಃ 30 ವರ್ಷ

ಉದ್ಯೋಗ ಃ ಪಿಡ್ಲ್ಯೂಕಂಟ್ರಾಕ್ಟರ್

ವಾಸ ಃ ನಂದಳಿಕೆ

ದಿನಾಂಕ 14.05.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಚಾಸಾ-2 ರವರ ಪರಿಚಯ ಇದೆ.

ದಿಃ26.01.2024 ರಂದು ಸುಮಾರು ಬೆಳಿಗ್ಗೆ 9.30 ಗಂಟೆಗೆ ನಂದಳಿಕೆ ಗ್ರಾಮದ ಮಾವಿನ ಕಟ್ಟೆಗೆ ಸ್ಥಳ ಮಹಜರು ಮಾಡಲು ಪೊಲೀಸರು ನನ್ನನ್ನು ಕರೆದಿರುತ್ತಾರೆ. ಚಾಸಾ-2 ಮತ್ತು 4 ರವರು ನನ್ನ ಜೊತೆ ಇದ್ದರು. ಮಹಜರು ಸಮಯದಲ್ಲಿ 2 ಕಾರುಗಳಾದ ಟಯಟೋ ಇಟಿಯಾಸ್ ಸ್ವಾಧೀನಪಕೊಂಡಿರುತ್ತಾರೆ. ಸ್ವದ್ರಿ ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಈಗ ಆ ದಾಖಲೆ ನಾನು ನೋಡಿದ್ದು ಅದರಲ್ಲಿ ನನ್ನ ಸಹಿ ಇದೆ. ಸ್ವದ್ರಿದಾಖಲೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸ್ವದ್ರಿ ಮಹಜರು ವೇಳೆಯಲ್ಲಿ ನಾಕಶೆಯನ್ನು ಮಾಡಿರುತ್ತಾರೆ. ಸ್ವದ್ರಿ ದಾಖಲೆಯನ್ನು ನಾನು ನೋಡಿದ್ದು ಅದನ್ನು ಈಗಾಗಲೇ ನಿಪಿ-4

ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಫೋಟೊ ನಿಪಿ-5(ಎ) ಮತ್ತು 5(ಬಿ) ಮಹಜರು ವೇಳೆಯಲ್ಲಿ ತೆಗೆದ ಫೊಟೋ ಆಗಿರುತ್ತದೆ. ಈಗ ನನಗೆ ತೋರಿಸಿದ ಫೋಟೊ ಮಹಜರು ವೇಳೆಯಲ್ಲಿ ತೆಗೆದ ನಿಪಿ-7 ಫೋಟೋ ಆಗಿರುತ್ತದೆ. ಪೊಲೀಸರು ಸ್ವಾಧೀನಪಡಿಸಿಕೊಂಡ 2 ಕಾರುಗಳನ್ನು ನಿಪಿ-6 ಮತ್ತು 8 ಭಾವಚಿತ್ರದಲ್ಲಿ ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಎಂ ಕೆ ವಿ ಕೆ ವಕೀಲರಿಂದಃ

ನಾನು ಅಪಘಾತವಾಗುವಾಗ ಇರಲಿಲ್ಲ. ಅಪಘಾತ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿರುತ್ತೇನೆ. ಅಪಘಾತವು ನನ್ನ ಮನೆಯ ಮುಂದೆ ಆಗಿರುತ್ತದೆ. ಪೊಲೀಸರಿಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಅವರು ಅದನ್ನು ಬರೆದುಕೊಂಡಿರುತ್ತಾರೆ. ಅಪಘಾತವಾಗುವಾಗ ಜನರು ಇದ್ದರು ಅಪಘಾತವಾದ ಜನ ಸೇರಿದ್ದರು. ಅದೇ ದಿನ ಅಪಘಾತವಾದ ನಂತರ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ಪೊಲೀಸರು ಬರುವಾಗ ನಾನು ಇರಲಿಲ್ಲ. ಸಾಕ್ಷಿ ಮುಂದುವರಿದು ಪೊಲೀಸರು ಸ್ಥಳಕ್ಕೆ ಬಂದವರು ನನಗೆ ಫೋನ್ ಮಾಡಿರುತ್ತಾರೆ. ನನಗೆ ಫೋನ್ ಮಾಡುವಾಗ ಒಂದು ಗಂಟೆ ಕಳೆದಿತ್ತು. ನಾನು ಫೊನ್ ಕರೆ ಸ್ವೀಕರಿಸುವಾಗ ಆಸ್ಪತ್ರೆಯಲ್ಲಿ ಇದ್ದೆ. ಯಾವ ಆಸ್ಪತ್ರೆಯಲ್ಲಿ ಇದ್ದೆ ಎಂದು ನೆನಪಿಲ್ಲ. ಫೋನ್ ಮಾಡಿದ ನಂತರ ನಾನು ಸ್ಥಳಕ್ಕೆ ಬರಲಿಲ್ಲ. ಪೊಲೀಸರನ್ನು ಪ್ರಥಮವಾಗಿ ನಾನು ಅಪಘಾತ ಸ್ಥಳದಲ್ಲಿ ಅಪಘಾತ ದಿನ ಭೇಟಿಯಾಗಿರುತ್ತೇನೆ. ಆ ದಿನ ನಾನು ಬರುವ ಮುಂಚೆ ಪೊಲೀಸುರ ಸ್ಥಳ ಮಹಜರು ಮತ್ತು ಹೇಳಿಕೆಗಳನ್ನು ಪಡೆದುಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಬರುವಾಗ ಸ್ಥಳದಲ್ಲಿಯೇ ವಾಹನಗಳು ಘಟನೆಯಾದ ಸ್ಥಿತಿಯಲ್ಲಿಯೇ ಮಾರ್ಗದಲ್ಲಿ ಇದ್ದವು.

ಆ ದಿನ ಕಾರ್ಕಳದ ಅತ್ತೂರಿನಲ್ಲಿ ಸೈಂಟ್ ಮೇರಿ ಹಬ್ಬ ಇದ್ದ ಕಾರಣ ರಸ್ತೆಯಲ್ಲಿ ತುಂಬಾ ವಾಹನಗಳು ಸಂಚರಿಸುತ್ತಿದ್ದವು ಎಂದರೆ ಸರಿ. ಸದ್ರಿ ರಸ್ತೆಯಲ್ಲಿ ಪಡುಬಿದ್ರೆ ಕಡೆಯಿಂದ ಬರುವ ವಾಹನಗಳಿಗೆ ಕಾಣಿಸುವ ಹಾಗೇ ತಿರುವು ರಸ್ತೆ ಇದೆ ನಿಧಾನವಾಗಿ ಚಲಿಸಿ ಎಂಬ ಸೈನ್ ಬೋರ್ಡ್ ಇದೆ ಎಂದರೆ ಸರಿ. ಪಡುಬಿದ್ರೆ ಕಡೆಯಿಂದ ಬರುವ ವಾಹನಗಳು ಸದ್ರಿ ಸೈನ್

ಬೋರ್ಡ್ ಇರುವ ಕಾರಣ ವೇಗವಾಗಿ ಚಲಿಸುವಂತಹ ವಾಹನಗಳು ಕೂಡಾ ಬ್ರೇಕ್ ಹಾಕಿ ನಿಧಾನವಾಗಿ ಬರುತ್ತವೆ ಎಂದರೆ ಸರಿ. ವೇಗವಾಗಿ ಚಲಿಸುವ ಕೆಲವು ವಾಹನಗಳು ಸೈನ್ ಬೋರ್ಡ್ ಇದ್ದರುೂ ಕೂಡಾ ವೇಗವಾಗಿ ಬರುತ್ತವೆ ಎಂದರೆ ಸರಿ. ನಿಪಿ-4 ನಕಾಶೆಯನ್ನು ಪೊಲೀಸರು ಸ್ಥಳದಲ್ಲಿಯೇ ತಯಾರಿಸಿರುತ್ತಾರೆ. ಆ ಸಮಯದಲ್ಲಿ ವೃತ್ತ ಪೊಲೀಸ್ ನೀರಿಕ್ಷಕರು ಇದ್ದರು. ನಿಪಿ-4 ನ್ನು ಯಾವ ಪೊಲೀಸರು ತಯಾರಿಸಿರುತ್ತಾರೆ ಎಂದು ಗೊತ್ತಿಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ